ದಿನಾಂಕ :21-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ ಬಿ ಎಸ್ ಕೆ ವಕೀಲರಿಂದ

ನಾನು ಮನ್ನಾಖೇಳ್ಳಿ ಗ್ರಾಮದ ನಿವಾಸಿ ಇರುತ್ತೇನೆ. ಶಂಕರ ತಂದೆ ಧರ್ಮಣ್ಣ ಹುಲಸೂರೆ ಯಾರು ಎಂದು ನನಗೆ ಗೊತ್ತಿಲ್ಲಾ. ನನಗೆ ಲಾರಿ ಮಾಲಿಕ ಹೆಸರು ಗೊತ್ತಿಲ್ಲಾ. ಲಾರಿ ಚಾಲಕ ಅನೀಲ ಪೋನ ಮಾಡಿ ಕರೆದಿದ್ದಕ್ಕೆ ಕೆಲಸ ಹೋಗಿದ್ದು. ನನಗೆ ಅವರು 5-6 ವರ್ಷದಿಂದ ಪರಿಚಯ ಇರುತ್ತಾರೆ. ಆಗಾಗ ಕೆಲಸಕ್ಕೆ ಕರೆಯುತ್ತಾ ಇರುತ್ತಾರೆ. ಅವರು ನನಗೆ ಪೋನ ಮಾಡಿ ಕರೆದಿದ್ದರು. ನನ್ನ ಮೋಬೈಲ ನಂಬರ ಹೇಳಲು ಆಗುವುದಿಲ್ಲಾ. ಗಾಡಿ ಖಾಲಿ ಮಾಡಬೇಕು ಬಾ ಎಂದು ಕರೆದಿದ್ದ, ಚೆನ್ನೈಗೆ ಹೋಗುತ್ತಿದ್ದು ಗಾಡಿ ಪಲ್ಟಿ ಆಯಿತು. ಆ ಸಮಯದಲ್ಲಿ ನಾನು ಲಾರಿ ಚಾಲಕ ಮತ್ತು ಕ್ಲೀನರ್ ಸುಭಾಷ ಇದ್ದೇವು. ಚಾಂಗಲೇರಿ ಘಾಟ್ ನಲ್ಲಿ ಅಪಘಾತ ಆಗಿರುತ್ತದೆ. ಅಪಘಾತದ ಬಗ್ಗೆ ದೂರು ಯಾರು ಕೊಟ್ಟಿದಾರೆ ಎಂದರೆ ಸಾಕ್ಷಿ ಉತ್ತರ ನೀಡಿಲ್ಲಾ. ಪೋಲಿಸರು ನನ್ನ ಹೇಳಿಕೆಯನ್ನು ಗುಲಬರ್ಗಾದಲ್ಲಿ ಪಡೆದಿರುತ್ತಾರೆ. ಪೋಲಿಸರು ಅಪಘಾತ ಆಗಿ ಮರುದಿವಸ ಬಂದಿದ್ದರು. ನಾನೇ ದೂರು ಕೊಟ್ಟಿದ್ದೇನೆ ಎನ್ನುವುದು ಸರಿ. ಅನೀಲ ಇವರು ಗಾಡಿ ಅನಲೋಡ ಮಾಡುವುದು ಇದೆ ಬಾ ಎಂದು ಕರೆದಿದ್ದರು ಎಂದು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ . ಆ ದಿನ ನಾನು ಚಿಂಚೋಳಿಗೆ ಹೋಗಲು ಲಾರಿ ಹತ್ತಿದ್ದೆ ಎಂದರೆ ಸರಿಯಲ್ಲ. ಅನೀಲ ನನಗೆ ಪರಿಚಯ ಇದ್ದ ಕಾರಣ ಚಿಂಚೋಳಿಗೆ ಬಿಡು ಎಂದು ಕೇಳಿದಕ್ಕೆ ಹತ್ತಿಸಿಕೊಂಡಿದ್ದ ಎಂದರೆ ಸರಿಯಲ್ಲ.

ಅಪಘಾತ ಆದಾಗ ನಾನು ಲಾರಿಯಲ್ಲಿ ಅನಧಿಕೃತ ಪ್ರಯಾಣಿಕ ಆಗಿದ್ದೆ ಎಂದರೆ ಸರಿಯಲ್ಲ. ಪರಿಹಾರ ಸಿಗುವುದಿಲ್ಲಾ ಎಂದು ಲಾರಿ ಚಾಲಕ ಮತ್ತು ಕ್ಲೀನರ ಜೊತೆ ಸೇರಿಕೊಂಡು ನಾನು ಲಾರಿಯಲ್ಲಿ ಕಾರ್ಮಿಕನಾಗಿ ಹೋಗುತ್ತಿದ್ದೆ ಎಂದು ಸುಳ್ಳು ದೂರು ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ಊರಿಗೆ ಸಾಮಾನು ಇಳಿಸಲು ಹೋದಾಗ ಅಲ್ಲಿ ಕಾರ್ಮಿಕರನ್ನು ಕರೆದುಕೊಳ್ಳುತ್ತಾರೆ ಎಂದರೆ ಸಾಕ್ಷಿ ಅಲ್ಲಿ ಸಿಗುವುದಿಲ್ಲಾ ಎಂದು ನನನ್ನು ಕರೆದುಕೊಂಡು ಹೋಗಿದ್ದರು ಎಂದು ಹೇಳುತ್ತಾರೆ. ಚೆನ್ನೈಯಲ್ಲಿ ಸಾಮಾನ್ಯವಾಗಿ ಕಾರ್ಮಿಕರು ಸಿಗುತ್ತಾರೆ ಎಂದರೆ ಸರಿ. ನಾನು ಲಾರಿಯಲ್ಲಿ ಕಾರ್ಮಿಕನಾಗಿ ಹೋಗುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪರಿಹಾರ

ಸಿಗುವುದಿಲ್ಲಾ ಎಂದು ಕಾರ್ಮಿಕ ಎಂದು ಹೇಳಿ ತಿಂಗಳಿಗೆ ರೂ. 20 ಸಾವಿರ ಸಂಬಳ ಕೊಡತ್ತಿದ್ದರು ಎಂದು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ನನ್ನ ಹಾಗೂ 1 ನೇ ಎದುರುದಾರ ನಡುವೆ ಕಾರ್ಮಿಕ ಮಾಲಿಕ ಸಂಬಂಧ ಇಲ್ಲಾ ಅಂದರೆ ಸರಿಯಲ್ಲ. ಲಾರಿಯಲ್ಲಿ ಇಬ್ಬರಿಗೆ ಮಾತ್ರ ಕೂರಲು ಅವಕಾಶ ಇದ್ದು ನಾನು3 ನೇ ವ್ಯಕ್ತಿ ಆಗಿರುವುದರಿಂದ ಎದರುದಾರ ಪರಿಹಾರ ನೀಡಲು ಭಾಧ್ಯಸ್ಥರು ಅಲ್ಲಾ ಅಂದರೆ ಸರಿಯಲ್ಲ. ನಾನು ಚಿಕಿತ್ಸೆಗೆ 4.50 ಲಕ್ಷ ಖರ್ಚು ಮಾಡಿದ್ದು, ಇನ್ನು ಮುಂದುವರೆದ ಚಿಕಿತ್ಸೆಗೆ ರೂ. 2.50 ಲಕ್ಷ ಖರ್ಚು ಇದೆ ಎಂದು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ನನ್ನ ಆದಾರ ಕಾರ್ಡನಲ್ಲಿ ಜನ್ಮ ದಿನಾಂಕ : 01-01-1958 ಎಂದು ಬರೆದಿರುವುದು ಸರಿ ಇರುತ್ತದೆ. ಅಪಘಾತ ಸಮಯದಲ್ಲಿ ನನಗೆ 64 ವರ್ಷ ವಯಸ್ಸು ಇತ್ತು ಎನ್ನುವುದು ಸರಿ. ನನಗೆ ಸಂಪೂರ್ಣ ಗುಣಮುಖವಾಗಿದ್ದು ಯಾವುದೇ ಅಂಗ ನೂನ್ಯತೆ ಇಲ್ಲಾ ಎನ್ನುವುದು ಸರಿಯಲ್ಲ. ವೈದ್ಯರಿಂದ ಸುಳ್ಳು ಪ್ರಮಾಣ ಪತ್ರ ಪಡೆದಿದ್ದೇನೆ ಅಂದರೆ ಸರಿಯಲ್ಲ. ತಿಂಗಳಿಗೆ 20 ಸಾವಿರ ಸಂಬಳಖ ಮತ್ತು ರೂ. 500 ಭತ್ಯೆ ಕೊಡತ್ತಿದ್ದರು ಎಂದು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ನನ್ನ ಹಾಗೂ 1 ನೇ ಎದುರದುರಾರ ನಡುವೆ ಮಾಲಿಕ ಮತ್ತು ಕಾರ್ಮಿಕ ಸಂಬಂಧ ಇಲ್ಲದ ಕಾರಣ ಪರಿಹಾರ ನೀಡಲು ಭಾಧ್ಯಸ್ಥ ಅಲ್ಲಾ ಅಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲಗಳನ್ನು ಸೃಷ್ಟಿಸಿ ಹಾಕಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ:ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.